**MVC: 511/2021**
**P.W-1**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 11.06.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದ**

ನನ್ನ ವಾಹನ ಆಟೋ. ನನ್ನ ವಾಹನಕ್ಕೆ ಸಂಬಂಧಿಸಿದ ಆರ್.ಸಿ, ಇನ್ಸೂರೆನ್ಸ್ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಲಾರಿ ಮತ್ತು ಆಟೋ ಎರಡೂ ವಾಹನಗಳು ಮುಖಾಮುಖಿ ಅಪಘಾತವಾಗಿವೆ ಎಂದರೆ ಸರಿ. ದಿಃ 03.01.2020 ರಂದು ಅಪಘಾತವಾಗಿರುತ್ತದೆ. ಆಟೋವನ್ನು ನಾನೇ ಚಾಲನೆ ಮಾಡುತ್ತಿದ್ದೆ. ನನಗೆ ಚಾಲನ ಪರವಾನಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಚಾಲನ ಪರವಾನಗಿ ಇಲ್ಲ ಆ ಕಾರಣಕ್ಕೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೂ ಸಹ ಚಾಲನ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ವಾಹನದ ಆರ್.ಸಿ ಪ್ರಕಾರ ಜಗಳೂರು ತಾಲೂಕಿನ ವ್ಯಾಪ್ತಿಗೆ ಮಾತ್ರ ಪರ್ಮಿಟ್ ಇತ್ತು ಎಂದರೆ ಸರಿಯಲ್ಲ. ಜಗಳೂರಿನಿಂದ ಅಪಘಾತವಾದ ಸ್ಥಳಕ್ಕೆ 25 ರಿಂದ 30 ಕಿ.ಮೀ ಆಗುತ್ತದೆ ಎಂದರೆ ಸರಿಯಲ್ಲ. ಸಂಚಾರಿ ನಿಯಮಗಳ ಪ್ರಕಾರ ನಾನು ನನ್ನ ಆಟೋದಲ್ಲಿ ಮೂರು ಜನರನ್ನು ಕೂಡಿಸಿಕೊಂಡು ಹೋಗಲು ಅನುಮತಿ ಇದೆ ಎಂದರೆ ಸರಿ. ಸದರಿ ಆಟೋದಲ್ಲಿ 9 ಜನರನ್ನು ನಾನು ಕೂಡಿಸಿಕೊಂಡು ಹೋಗುತ್ತಿದ್ದೆ ಎಂದರೆ ಸರಿ. ನಾನು ಪರ್ಮಿಟ್ ನಿಯಮಗಳನ್ನು ಉಲ್ಲಂಘನೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾಹನಕ್ಕೆ ಉಂಟಾದ ಜಖಂಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಯಾವುದೇ ಜಖಂ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ಚಿತ್ರದುರ್ಗದ ಮಾರುತಿ ಗ್ಯಾರೇಜ್ ನಲ್ಲಿ ರಿಪೇರಿ ಮಾಡಿಸಿರುತ್ತೇನೆ. ಸದರಿ ಗ್ಯಾರೇಜ್ ಕಾನೂನು ರೀತಿಯಲ್ಲಿ ಲೈಸೆನ್ಸ್ ಪಡೆದು ನಡೆಸುತ್ತಿದ್ದ ಗ್ಯಾರೇಜ್ ಅಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಸಂಬಂಧಿಸಿದಂತೆ ನಾನು ಹೇಳುವ ರೀತಿಯಲ್ಲಿ ರೂ. 1,13,000/- ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಆಟೋಗೆ ಉಂಟಾದ ಜಖಂಗೆ ಸಂಬಂಧಿಸಿದಂತೆ ವಿಮಾ ಕಂಪೆನಿಯಲ್ಲಿ ಯಾವುದೇ ಕ್ಲೇಮ್ ಮಾಡಿರುವುದಿಲ್ಲ. 2 ನೇ ಎದುರುದಾರರ ಕಂಪೆನಿಯಲ್ಲಿ ಸಹ ನಾನು ಯಾವುದೇ ನಷ್ಟ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ಆಟೋ ಓಡಿಸುವುದರಿಂದ ನನಗೆ

ತಿಂಗಳಿಗೆ ರೂ. 30,000/- ಆದಾಯ ಇತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. 2 ನೇ ಎದುರುದಾರರು ನನಗೆ ಯಾವುದೇ ನಷ್ಟ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. 3 ನೇ ಎದುರುದಾರರ ಬಳಿ ಮಾತ್ರ ನಷ್ಟ ಪರಿಹಾರವನ್ನು ಕೇಳಬಹುದು, 2 ನೇ ಎದುರುದಾರರ ಬಳಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಆಟೋಗೆ ಆದಂತಹ ನಷ್ಟ ಪರಿಹಾರವನ್ನು ಕೋರಿ ಈ ಅರ್ಜಿಯನ್ನು 2 ನೇ ಎದುರುದಾರರ ವಿರುದ್ಧ ಸಲ್ಲಿಸಲು ಬರುವುದಿಲ್ಲ ಹಾಗೂ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಅರ್ಜಿಯನ್ನು ದಾಖಲಿಸಿ ಸುಳ್ಳು ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**